**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 824/2021**

ಚಾ.ಸಾ-01, ಪ್ರಾ.ಸಾ-01

| | | |
|---|---|---|
| ಹೆಸರು | : | ಪರಮೇಶ್ |
| ತಂದೆಯ ಹೆಸರು | : | ಬೋಗಯ್ಯ |
| ವಯಸ್ಸು | : | 39 |
| ವೃತ್ತಿ | : | ಕೂಲಿಕೆಲಸ |
| ವಾಸ | : | ಬೆಂಗಳೂರು |

**ದಿನಾಂಕ 10.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾಸಾ-2, 3, 5ಮತ್ತು 6 ರವರ ಹಾಗೂ ಆರೋಪಿತರ ಪರಿಚಯವಿದೆ. ಚಾಸಾ-4 ನನ್ನ ತಾಯಿ.

ದಿನಾಂಕ 23.06.2021 ರಂದು ರಾತ್ರಿ 8.30 ಗಂಟೆಗೆ ಚಿದರವಳ್ಳಿ ಗ್ರಾಮದ ಅಂಬೇಡ್ಕರ್ ವೃತ್ತದ ಹತ್ತಿರ ಆರೋಪಿತರು ಹಳೆಯ ದ್ವೇಷದಿಂದ ನನ್ನನ್ನು ಸುತ್ತುವರಿದು ನನಗೆ ಅವಾಚ್ಯ ಶಬ್ದಗಳಿಂದ ಬೈದು, 2ನೇ ಆರೋಪಿತ ನನ್ನನ್ನು ಹಿಡಿದುಕೊಂಡಿದ್ದು, 1ನೇ ಆರೋಪಿತ ನನ್ನ ತಲೆಗೆ ದೊಣ್ಣೆಯಿಂದ ಹೊಡೆದಿರುತ್ತಾನೆ. ನನಗೆ ರಕ್ತ ಬಂದಿರುತ್ತದೆ. ಆರೋಪಿತರು ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. 4ನೇ ಆರೋಪಿತಳು ನನ್ನ ಕಣ್ಣಿಗೆ ಖಾರದಪುಡಿಯನ್ನು ಎರಚಿರುತ್ತಾರೆ.

ಆನಂತರ ಅಲ್ಲಿದ ಜನರು ನನ್ನನ್ನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು.

ಘಟನೆಯ ಮರುದಿನ ತಿ. ನರಸೀಪುರ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು.

ದಿನಾಂಕ 25.06.2021ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1.30ಗಂಟೆ ವೇಳೆಗೆ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಅಲ್ಲಿ ಪರಿಶೀಲಿಸಿ, ಸಾಕ್ಷಿದಾರರ ಹೇಳಿಕೆಗಳನ್ನು ಪಡೆದು ಕೊಂಡಿರುತ್ತಾರೆ. ಆ ವೇಳೆಗೆ ಚಾಸಾ-5 ಮತ್ತು 6 ರವರು ಇದ್ದರು. ನಾನು ಮತ್ತು ಅವರು ಪೊಲೀಸರಿಗೆ ಘಟನಾ ಸ್ಥಳವನ್ನು ತೋರಿಸಿದೆವು. ಹಲ್ಲೆಗೆ ಬಳಸಲಾಗಿದ್ದ ದೊಣ್ಣೆಯನ್ನು ಪೊಲೀಸರು ಸ್ಥಳದಿಂದ ಪಡೆದುಕೊಂಡರು. ಆ ವೇಳೆಗೆ, ಚಾಸಾ-5 ಮತ್ತು 6 ರವರು ಸಹಿ ಮಾಡಿರುತ್ತೇವೆ. ಸಾಕ್ಷಿಯ ಸಹಿಯಿರುವ ದಾಖಲೆಯು ಪಂಚನಾಮವಾಗಿದ್ದು, ಅದನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

ಸದರಿ ದೊಣ್ಣೆಯನ್ನು ಈಗ ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದನ್ನು ಎಂ.ಒ.1 ಎಂದು ಗುರುತಿಸಲಾಯಿತು.

ಘಟನೆಯಲ್ಲಿ ಆದ ಗಾಯದಿಂದ ನನಗೆ ಈಗಲೂ ಕಣ್ಣೀರು ಬರುತ್ತದೆ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

3ನೇ ಆರೋಪಿತ ಆತನ ಕಾಲಿನಿಂದ ನನಗೆ ಒದ್ದಿರುತ್ತಾರೆ ಎಂದರೆ ಸರಿ. 4ನೇ ಆರೋಪಿತಳು ನನ್ನನ್ನು ಸಾಯಿಸುವಂತೆ 1 ರಿಂದ 3ನೇ ಆರೋಪಿತರಿಗೆ ಕುಮ್ಮಕ್ಕು ನೀಡಿರುತ್ತಾಳೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎಂ.ಎಸ್. ವಕೀಲರಿಂದ ಆರೋಪಿತರ ಪರ :**

ನಾನು ಪದವೀಧರ. ನನಗೆ ಕನ್ನಡವನ್ನು ಚೆನ್ನಾಗಿ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ಚಾಸಾ–2 ರವರು ನನ್ನ ದೂರದ ಸಂಬಂಧಿ. ಚಾಸಾ–3 ರವರು ನನ್ನ ಚಿಕ್ಕಪ್ಪನ ಮಗ ಎಂದರೆ ಸರಿಯಲ್ಲ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–5 ರವರು ಚಾಸಾ–2 ರವರ ಮಗ ಎಂದರೆ ಸರಿ. ಚಾಸಾ–6

ರವರು ಚಾಸಾ-2 ರವರ ಅಕ್ಕನ ಮಗ ಎಂದರೆ ಸರಿ. ಚಾಸಾ-5 ಮತ್ತು 6 ರವರು ದೂರದ ಸಂಬಂಧಿಗಳು ಎಂದರೆ ಸರಿ.

ನಿಪಿ.1 ರಲ್ಲಿರುವ ಬರವಣಿಗೆ ನನ್ನದಾಗಿದೆ. ಆರೋಪಿತರು ಮತ್ತು ನಮಗೂ ಹಳೆಯ ದ್ವೇಷದಿಂದ ವೈಮನಸ್ಸು ಇದೆ ಎಂದರೆ ಸರಿ. ನಮ್ಮ ಗ್ರಾಮ ಪಂಚಾಯಿತಿಯಲ್ಲಿ 2ನೇ ಆರೋಪಿತ ಪಂಚಾಯಿತಿ ಸದಸ್ಯರಾಗಿದ್ದಾರೆ ಎಂದರೆ ಸರಿ. ಅವರ ವಿರುದ್ಧ ನಮ್ಮ ಸ್ನೇಹಿತರಾದ ಚಂದ್ರುರವರನ್ನು ಚುನಾವಣೆಗೆ ನಿಲ್ಲಿಸಿ, ಅವರನ್ನು ಬೆಂಬಲಿಸಿದ್ದೆವು ಎಂದರೆ ಸರಿಯಲ್ಲ. ಅವರ ವಿರುದ್ಧ 2ನೇ ಆರೋಪಿತ ವಿಜಯಗಳಿಸಿದ್ದರಿಂದ ನಾವು ಆರೋಪಿತರ ವಿರುದ್ಧ ದ್ವೇಷ ಹೊಂದಿದ್ದೆವು ಎಂದರೆ ಸರಿಯಲ್ಲ.

ನಮ್ಮ ಮತ್ತು ಆರೋಪಿತರ ಮನೆಗಳ ನಡುವೆ ಎಷ್ಟು ದೂರವಿದೆ ಎಂದರೆ ಒಂದು ಬೀದಿ ದೂರವಿದೆ. ನಾನು ಹೆಚ್ಚಾಗಿ ಊರಿನಲ್ಲಿ ಇರುವುದಿಲ್ಲ.

ದಿನಾಂಕ 23.06.2021ರಂದು ಬೆಂಗಳೂರಿನಿಂದ ಸಂಜೆ 5.00 ಗಂಟೆಗೆ ಊರಿಗೆ ಬಂದಿದ್ದೆ. ನಮ್ಮ ಊರಿನಲ್ಲಿರುವ ನಮ್ಮ ಮನೆಗೆ ಬೇರೆ ಕಡೆಯಿಂದ ಬಂದಾಗ ನಮ್ಮ ಊರಿನಲ್ಲಿರುವ ಅಂಬೇಡ್ಕರ್ ವೃತ್ತದ ಕಡೆಯಿಂದ ಹೋದರೆ ಸಮೀಪವಾಗುತ್ತದೆ. ಘಟನೆಯ ಪೂರ್ವದಲ್ಲಿ ಸದರಿ ವೃತ್ತದ ಕಡೆಯಿಂದ ನಡೆದುಕೊಂಡು ನನ್ನ ಸಂಬಂಧಿಕರ ಮನೆಗೆ ಹೋಗಿದ್ದೆ. ಆ ವೇಳೆಗೆ ಸಂಜೆ 7.00 ಗಂಟೆಯಾಗಿತ್ತು. ಆ ಸಂಬಂಧಿಕರ

ಮನೆಯಿಂದ ಆ ವೃತ್ತದ ಕಡೆಗೆ ಬರುತ್ತಿರುವಾಗ ಘಟನೆಯಾಗಿರುತ್ತದೆ. ಆ ವಿಷಯವನ್ನು ನನ್ನ ದೂರಿನಲ್ಲಿ ಹೇಳಿದ್ದೇನೆ.

ನನಗೆ ಮದ್ಯಪಾನ ಮಾಡುವ ಅಭ್ಯಾಸವಿದೆ. ನಾನು ಬೆಂಗಳೂರಿನಿಂದ ಬರುವಾಗ ಮದ್ಯಪಾನ ಮಾಡಿಕೊಂಡು ಬಂದಿದ್ದು, ಆರೋಪಿತರ ವಿರುದ್ಧ ಇದ್ದ ಹಳೆಯ ದ್ವೇಷದಿಮದ ನಾನು ಮತ್ತು ಚಾಸಾ-2 ರವರು ಸೇರಿ ಬೀಯರ್ ಬಾಟೆಲ್‌ಗಳನ್ನು ಹೊಂದಿ ಗಲಾಟೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಆ ರೀತಿ ಗಲಾಟೆ ಮಾಡಿದ್ದರಿಂದ 2ನೇ ಆರೋಪಿತ ನಮಗೆ ತಿಳುವಳಿಕೆ ಹೇಳಿದ್ದರು ಎಂದರೆ ಸರಿಯಲ್ಲ. ಆದಾಗ್ಯೂ, ನಾವು ಗಲಾಟೆಯನ್ನು ಮುಂದುವರೆಸಿ, ನಾವೇ ಬಿದ್ದು ಪೆಟ್ಟು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆನಂತರ 2ನೇ ಆರೋಪಿತನು ನನ್ನ ಮತ್ತು ಚಾಸಾ-2 ರವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರೂ ಎಂದರೆ ನನಗೆ ಗೊತ್ತಿಲ್ಲ. ಆ ದೂರಿನ ಸಂಬಂಧ ಅವರಿಗೆ ಹಿಂಬರಹ ನೀಡಿ ನಮ್ಮನ್ನು ವಿಚಾರಣೆ ಮಾಡುತ್ತೇವೆ ಎಂದು ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ವಿಚಾರಣೆ ಮಾಡಲು ಪೊಲೀಸರು ನಮ್ಮನ್ನು ಕರೆದಿದ್ದರಿಂದ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ಘಟನಾ ಸ್ಥಳದ ಅಕ್ಕಪಕ್ಕ ಬಹಳಷ್ಟು ಮನೆಗಳು ಇವೆ ಎಂದರೆ ಸರಿ. ಅಲ್ಲಿ ಸುಮಾರು 30 ಜನರಿದ್ದರು. ಅವರು ಯಾರು ಎಂದರೆ ಅವರ ಹೆಸರುಗಳು ನನಗೆ ಅಷ್ಟಾಗಿ ಗೊತ್ತಿಲ್ಲ. ಆ ಜನರು ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿಲ್ಲ.

ನಾನು ಹೇಳುವಂತೆ 4ನೇ ಆರೋಪಿತಳು ಖಾರದ ಪುಡಿ ಎರಚಿರದೆ ನನ್ನ ತಾಯಿ ಚಾಸಾ-4 ರವರು ಖಾರದ ಪುಡಿಯನ್ನು ಆರೋಪಿತರ ವಿರುದ್ಧ ಎರಚಿದ್ದರು ಎಂದರೆ ಸರಿಯಲ್ಲ.

ಘಟನೆಯ ವೇಳೆಗೆ ಕತ್ತಲಾಗಿತ್ತು ಎಂದರೆ ಸರಿ, ಆ ವೇಳೆಗೆ ಬೀದಿ ದೀಪಗಳು ಇದ್ದವು. ಘಟನೆಯ ವೇಳೆಗೆ ಕತ್ತಲಾಗಿದ್ದರಿಂದ ಮತ್ತು ಸ್ಥಳದಲ್ಲಿ ಸುಮಾರು 30 ಜನರಿದ್ದರಿಂದ ಘಟನೆಯ ಬಗ್ಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಎಂಒ.1ರ ಯಾವ ಭಾಗವು 1ನೇ ಆರೋಪಿತನ ಕೈಯಲ್ಲಿತ್ತು ಎಂದು ನನಗೆ ಹೇಳಲು ಬರುವುದಿಲ್ಲ, ಆ ದೊಣ್ಣೆ ಅವರ ಕೈಯಲ್ಲಿತ್ತು. 3ನೇ ಆರೋಪಿತ ಯಾವ ಕಾಲಿನಿಂದ ನನಗೆ ಒದ್ದರು ಎಂದು ನನಗೆ ಹೇಳಲು ಬರುವುದಿಲ್ಲ, ಆದರೆ ಕಾಲಿನಿಂದ ಒದ್ದಿರುತ್ತಾರೆ.

3ನೇ ಆರೋಪಿತ ಸುಮಾರು 20 ವರ್ಷಗಳ ಹಿಂದೆ ಕಬ್ಬಿನ ಗಾಡಿಯಿಂದ ಬಿದ್ದು ಅವರಿಗೆ ಕಾಲಿನ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. (ಆರೋಪಿತರ ವಕೀಲರ ಕೋರಿಕೆ

ಮೇರೆಗೆ 3ನೇ ಆರೋಪಿತನ ಚಲನೆಯನ್ನು ನೋಡಲಾಯಿತು ಮತ್ತು ಅವರ ವಯಸ್ಸನ್ನು ಈಗ ವಿಚಾರಿಸಲಾಗಿ ಅವರಿಗೆ 70 ವರ್ಷ ಎಂದು ತಿಳಿಸಿದರು). ಅವರಿಗೆ ವಯಸ್ಸಾಗಿದ್ದರಿಂದ ಮತ್ತು ಅವರ ಕಾಲಿನ ಸ್ವಾಧೀನ ಇಲ್ಲದ ಕಾರಣ ಅವರು ನನಗೆ ಒದ್ದಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ 1 ಮತ್ತು 4ನೇ ಆರೋಪಿತರು ಯಾವುದೇ ಕೃತ್ಯ ಮಾಡಿಲ್ಲ ಎಂದರೆ ಸರಿಯಲ್ಲ.

ನಮ್ಮ ಚಿದರವಳ್ಳಿ ಗ್ರಾಮದಿಂದ ತಿ. ನರಸೀಪುರಕ್ಕೆ ಯಾವುದೇ ವಾಹನದಲ್ಲಿ ಬಂದರೆ ಸುಮಾರು ಅರ್ಧಗಂಟೆ ಬೇಕು ಎಂದರೆ ಸರಿ. ನಾನು ಘಟನೆಯ ದಿನ ದೂರು ನೀಡಲು ನನಗೆ ತೊಂದರೆ ಇತ್ತಾ ಎಂದರೆ ಆ ದಿನ ಪೊಲೀಸ್ ಠಾಣೆಗೆ ಹೋಗಿದ್ದು, ದೂರನ್ನು ಸ್ವೀಕರಿಸಲು ಯಾರು ಇಲ್ಲದ ಕಾರಣ ಮರುದಿನ ದೂರು ಕೊಡುವಂತೆ ಅಲ್ಲಿದ್ದ ಪೊಲೀಸರು ತಿಳಿಸಿದರು. ಆ ವಿಷಯವನ್ನು ದೂರಿನಲ್ಲಿ ಹೇಳಿಲ್ಲ.

ಘಟನೆಯ ದಿನ ಆಸ್ಪತ್ರೆಗೆ ಹೋದಾಗ ರಾತ್ರಿ 10.30 ರಿಂದ 11.00 ಗಂಟೆಯಾಗಿತ್ತು. ನಾನು ನಿಪಿ.2ರ ಪಂಚನಾಮದ ವಿವರಗಳನ್ನು ಓದಿ ತಿಳಿದು ಕೊಂಡಿದ್ದೇನೆ. ನಾನು ಅದಕ್ಕೆ ಸಹಿ ಮಾಡುವಾಗ ಅದರ ವಿವರಗಳನ್ನು ಓದಿ, ತಿಳಿದು ಸಹಿ ಮಾಡಿದ್ದೇನೆ ಎಂದು ನಮೂದಿಸಿಲ್ಲ.

ಎಂಓ.1ರ ದೊಣ್ಣೆಯ ಸುತ್ತಳತೆ ಎಷ್ಟು ಎಂದು ನನಗೆ ಗೊತ್ತಿಲ್ಲ. ಅದು ನೀಲಗಿರಿ ಮರದ ದೊಣ್ಣೆ ಎಂದರೆ ಸರಿ. ಅದು ಸುಮಾರು 3 ಅಡಿ ಉದ್ದ ಇದೆ ಎಂದರೆ ಸರಿ. ಆ ರೀತಿಯ ದೊಣ್ಣೆಯನ್ನು ಸೌದೆಗಾಗಿ ನಮ್ಮ ಊರಿನಲ್ಲಿ ಬಳಸಲಾಗುತ್ತದೆ ಎಂದರೆ ಸರಿ.

ನಾನು ಹೇಳುವಂತೆ ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಯಾವುದೇ ಪಂಚನಾಮ ಜರುಗಿಸಲ್ಲ ಮತ್ತು ಏನನ್ನೂ ಜಪ್ತಿಪಡಿಸಿಲ್ಲ ಎಂದರೆ ಸರಿಯಲ್ಲ.

ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದೆ ಇದ್ದರೂ ಕೂಡ ಹಳೆಯ ದ್ವೇಷದ ಆಧಾರದ ಮೇಲೆ ಅವರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಒಬ್ಬ ವ್ಯಕ್ತಿಯ ಕಣ್ಣಿಗೆ ಖಾರದಪುಡಿ ಬಿದ್ದರೆ ಎದುರಿಗೆ ಇರುವ ಯಾವುದೇ ವಸ್ತು ಮತ್ತು ವ್ಯಕ್ತಿ ಕಾಣುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 824/2021**

ಚಾ.ಸಾ-02, ಫ್ರಾ.ಸಾ-02

| | | |
|---|---|---|
| ಹೆಸರು | : | ಲೋಕೇಶ್ |
| ತಂದೆಯ ಹೆಸರು | : | ನಂಜಯ್ಯ |
| ವಯಸ್ಸು | : | 40 |
| ವೃತ್ತಿ | : | ಖಾಸಗಿ ಕೆಲಸ |
| ವಾಸ | : | ಚಿದರವಳ್ಳಿ ಗ್ರಾಮ, ತಿ. ನರಸೀಪುರ ತಾಲ್ಲೂಕು. |

**ದಿನಾಂಕ 10.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಫ್ರಾಸಾ-1, ಚಾಸಾ-4 ರಿಂದ 6 ರವರು ನನ್ನ ಸಂಬಂಧಿಕರು. ಚಾಸಾ-3 ಮತ್ತು ಆರೋಪಿತರ ಪರಿಚಯವಿದೆ.

ದಿನಾಂಕ 23.06.2021 ರಂದು ರಾತ್ರಿ 8.00 ಗಂಟೆಗೆ ನಮ್ಮ ಗ್ರಾಮದ ಅಂಬೇಡ್ಕರ್ ಭವನದ ಹತ್ತಿರ ಗಲಾಟೆ ಆಗುತ್ತಿತ್ತು. ಆ ವೇಳೆಗೆ ನಾನು ಮನೆಯಲ್ಲಿದ್ದೆ. ನಾನು ಗಲಾಟೆಯ ಸ್ಥಳಕ್ಕೆ ಬಂದು ನೋಡಿದಾಗ, 2ನೇ ಆರೋಪಿತ ಫ್ರಾಸಾ-1 ರವರನ್ನು ಹಿಂದಕ್ಕೆ ಹಿಡಿದುಕೊಂಡಿದ್ದು, 1ನೇ ಆರೋಪಿತ ದೊಣ್ಣೆಯಿಂದ ಫ್ರಾಸಾ-1 ರವರ ತಲೆಯ ಎಡಭಾಗಕ್ಕೆ ಹೊಡೆದಿರುತ್ತಾರೆ. ಆರೋಪಿತರು ಅವಾಚ್ಯ ಶಬ್ದಗಳಿಂದ ಫ್ರಾಸಾ-1 ರವರಿಗೆ ಬೈದಿರುತ್ತಾರೆ. 3ನೇ ಆರೋಪಿತ ಕಾಲಿನಿಂದ ಫ್ರಾಸಾ-1 ರವರಿಗೆ

ಒದ್ದಿರುತ್ತಾರೆ. 4ನೇ ಆರೋಪಿತಳು ಪ್ರಾಸಾ-1 ರವರಿಗೆ ಹೊಡೆಯುವಂತೆ 1 ರಿಂದ 3ನೇ ಆರೋಪಿತರಿಗೆ ಕುಮ್ಮಕ್ಕು ನೀಡುತ್ತಿದ್ದಳು. ಆರೋಪಿತರು ಪ್ರಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. 4ನೇ ಆರೋಪಿತಳು ಖಾರದಪುಡಿಯನ್ನು ಕೈಯಲ್ಲಿ ಹಿಡಿದುಕೊಂಡಿದ್ದಳು. ಆಕೆ ಪ್ರಾಸಾ-1 ರವರಿಗೆ ಖಾರದ ಪುಡಿ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ಆನಂತರ ನಾನು ಮತ್ತು ಚಾಸಾ-4 ರವರು ಸೇರಿ ಪ್ರಾಸಾ-1 ರವರನ್ನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು.

ಸದರಿ ದೊಣ್ಣೆಯನ್ನು ಈಗ ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ಎಂ.ಒ.1 ಎಂದು ಗುರುತಿಸಲ್ಪಟ್ಟಿದೆ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

4ನೇ ಆರೋಪಿತಳು ಖಾರದ ಪುಡಿಯನ್ನು ಪ್ರಾಸಾ-1 ರವರ ಕಣ್ಣಿಗೆ ಎರಚಿದರು ಎಂದರೆ ನಾನು ನೋಡಿಲ್ಲ.

**<u>ಪಾಟೀ ಸವಾಲುಃ ಶ್ರೀ ಎಂ.ಎಸ್. ವಕೀಲರಿಂದ ಆರೋಪಿತರ ಪರ :</u>**

ನಾನು ಬಿ.ಎ. ಪದವೀಧರ. ನನಗೆ ಕನ್ನಡವನ್ನು ಚೆನ್ನಾಗಿ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ಚಾಸಾ-3 ರವರು ಫ್ರಾಸಾ-1 ರವರ ಸಂಬಂಧಿ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನೆ.

ಘಟನೆಯ ದಿನ ಬೆಳಗಿನ ಜಾವಾ ನಾನು ಬೆಂಗಳೂರಿನಿಂದ ನಮ್ಮ ಊರಿಗೆ ಬಂದಿದ್ದೆ. ನಾನು ಮತ್ತು ಫ್ರಾಸಾ-1 ರವರು ಊರಿಗೆ ಜೊತೆಯಲ್ಲಿ ಬಂದಿದ್ದೆವು. ಘಟನಾ ಸ್ಥಳದಿಂದ ನನ್ನ ಮನೆಗೆ ಎಷ್ಟು ದೂರವಿದೆ ಎಂದರೆ ನಾಲ್ಕು ಮನೆಗಳು ಆದ ನಂತರ ನಮ್ಮ ಮನೆ ಬರುತ್ತದೆ. ಆ ಘಟನಾ ಸ್ಥಳದಲ್ಲಿ ಮಾತುಕತೆಯಾದರೆ 4 ಮನೆಗಳು ಆದ ನಂತರ ಇರುವ ನಮ್ಮ ಮನೆಗೆ ಕೇಳಿಸುತ್ತಾ ಎಂದರೆ ಜೋರಾಗಿ ಗಲಾಟೆಯಾದರೆ ಕೇಳಿಸುತ್ತದೆ. ಆ ರೀತಿ ಗಲಾಟೆಯ ಶಬ್ದ ಕೇಳಿದಾಗ ಸುಮಾರು ರಾತ್ರಿ 8.00 ಗಂಟೆಯಾಗಿತ್ತು. ಆ ರೀತಿ ಶಬ್ದ ಕೇಳಿದ 5 ನಿಮಿಷದ ನಂತರ ನಾನು ಸ್ಥಳಕ್ಕೆ ಬಂದೆನು. ಆ ವೇಳೆಗೆ ಕತ್ತಲಿತ್ತು ಎಂದರೆ ಸರಿ.

ಘಟನಾ ಸ್ಥಳದ ಅಕ್ಕಪಕ್ಕ ಬಹಳಷ್ಟು ಮನೆಗಳಿವೆ ಎಂದರೆ ಸರಿ. ಅಲ್ಲಿ ಸುಮಾರು 20-30 ಜನರಿದ್ದರು. ಅವರು ಯಾರು ಯಾರು ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ನಾನು ಸ್ಥಳಕ್ಕೆ ಬಂದಾಗ ಗಲಾಟೆ ನಡೆಯುತ್ತಿತ್ತು. ಹಾಗಾಗಿ, ನನಗೆ ಗಲಾಟೆಯ ಬಗ್ಗೆ ಗೊತ್ತಿಲ್ಲ ಎಂದರೆ 2ನೇ ಆರೋಪಿತ ಫ್ರಾಸಾ-1 ರವರನ್ನು ಹಿಡಿದುಕೊಂಡಿದ್ದ ಬಗ್ಗೆ ನನಗೆ ಗೊತ್ತಿದೆ, ಅದನ್ನು ಹೊರತುಪಡಿಸಿ ಬೇರೆ ಗೊತ್ತಿಲ್ಲ.

3ನೇ ಆರೋಪಿತ ಸುಮಾರು 20 ವರ್ಷಗಳ ಹಿಂದೆ ಕಬ್ಬಿನ ಗಾಡಿಯಿಂದ ಬಿದ್ದು ಅವರಿಗೆ ಕಾಲಿನ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. (ಆರೋಪಿತರ ವಕೀಲರ ಕೋರಿಕೆ ಮೇರೆಗೆ 3ನೇ ಆರೋಪಿತನ ಚಲನೆಯನ್ನು ನೋಡಲಾಯಿತು ಮತ್ತು ಅವರ ವಯಸ್ಸನ್ನು ಈಗ ವಿಚಾರಿಸಲಾಗಿ ಅವರಿಗೆ 70 ವರ್ಷ ಎಂದು ತಿಳಿಸಿದರು). ಅವರಿಗೆ ವಯಸ್ಸಾಗಿದ್ದರಿಂದ ಮತ್ತು ಅವರ ಕಾಲಿನ ಸ್ವಾಧೀನ ಇಲ್ಲದ ಕಾರಣ ಅವರು ನನಗೆ ಒದ್ದಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ 1 ಮತ್ತು 4ನೇ ಆರೋಪಿತರು ಯಾವುದೇ ಕೃತ್ಯ ಮಾಡಿಲ್ಲ ಎಂದರೆ ಸರಿಯಲ್ಲ.

ಗಲಾಟೆಯ ಪೂರ್ವದಲ್ಲಿ ನಮಗೆ ಮತ್ತು ಆರೋಪಿತರಿಗೆ ವೈಮಸ್ಸು ಇತ್ತು ಎಂದರೆ ಸರಿಯಲ್ಲ. ಫ್ರಾಸಾ-1 ಮತ್ತು ಆರೋಪಿತರ ನಡುವೆ ಯಾವುದೇ ವೈಮನಸ್ಸು ಇರಲಿಲ್ಲ. ಅವರ ನಡುವೆ ದ್ವೇಷವಿತ್ತು ಎಂದು ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಯ ಭಾಗವನ್ನು ತಿರಸ್ಕರಿಸಿದ್ದರಿಂದ ಅದನ್ನು ನಿಡಿ.1 ಎಂದು ಗುರುತಿಸಲಾಯಿತು.

ನನಗೆ ಮದ್ಯಪಾನ ಮಾಡುವ ಅಭ್ಯಾಸವಿದೆ ಎಂದರೆ ಸರಿ. ಘಟನೆಯ ದಿನ ನಾನು ಮತ್ತು ಫ್ರಾಸಾ-1 ರವರು ಮದ್ಯಪಾನ ಮಾಡಿ, ಬೀಯರ್ ಬಾಟೆಲ್‌ಗಳನ್ನು ಹೊಂದಿ ಆರೋಪಿತರ ವಿರುದ್ಧ ಗಲಾಟೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಆ ರೀತಿ ಗಲಾಟೆ ಮಾಡಿದ್ದರಿಂದ 2ನೇ ಆರೋಪಿತ ನಮಗೆ ತಿಳುವಳಿಕೆ ಹೇಳಿದ್ದರು ಎಂದರೆ ಸರಿಯಲ್ಲ.

ಆದಾಗ್ಯೂ, ನಾವು ಗಲಾಟೆಯನ್ನು ಮುಂದುವರೆಸಿದ್ದು, ತಳ್ಳಾಟ ನೂಕಾಟದಲ್ಲಿ ಫ್ರಾಸಾ–1 ರವರು ಬಿದ್ದು ಪೆಟ್ಟು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆನಂತರ 2ನೇ ಆರೋಪಿತನು ನನ್ನ ಮತ್ತು ಫ್ರಾಸಾ–1 ರವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರೂ ಎಂದರೆ ಸರಿಯಲ್ಲ. ಆ ದೂರಿನ ಸಂಬಂಧ ವಿಚಾರಣೆ ಮಾಡಲು ಪೊಲೀಸರು ನಮ್ಮನ್ನು ಕರೆದಿದ್ದರಿಂದ ಆರೋಪಿತರ ವಿರುದ್ಧ ಫ್ರಾಸಾ–1 ರವರ ಮೂಲಕ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

ಎಂಒ.1ರ ದೊಣ್ಣೆಯು 3 ಅಡಿ ಉದ್ದ ಇದೆ ಎಂದರೆ ಸರಿ. ಅದರೆ ಸುತ್ತಳತೆ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅದು ನೀಲಗಿರಿ ಮರದ ದೊಣ್ಣೆ ಎಂದರೆ ಸರಿ. ಆ ರೀತಿಯ ದೊಣ್ಣೆಯನ್ನು ಸೌದೆಗಾಗಿ ನಮ್ಮ ಊರಿನಲ್ಲಿ ಬಳಸಲಾಗುತ್ತದೆ ಎಂದರೆ ಸರಿ. ಎಂಒ.1ರ ದೊಣ್ಣೆಯನ್ನು ಹಲ್ಲೆಗೆ ಬಳಸಲಾಯಿತು ಎಂದು ಹೇಳಲು ವಿಶೇಷ ಗುರುತು ಇದೆ.

ನಮ್ಮ ಗ್ರಾಮ ಪಂಚಾಯಿತಿಯಲ್ಲಿ 2ನೇ ಆರೋಪಿತ ಪಂಚಾಯಿತಿ ಸದಸ್ಯರಾಗಿದ್ದಾರೆ ಎಂದರೆ ಸರಿ. ಅವರ ವಿರುದ್ಧ ನಮ್ಮ ಸ್ನೇಹಿತರಾದ ಚಂದ್ರುರವರನ್ನು ಚುನಾವಣೆಗೆ ನಿಲ್ಲಿಸಿ, ಅವರನ್ನು ಬೆಂಬಲಿಸಿದ್ದೆವು ಎಂದರೆ ಸರಿಯಲ್ಲ. ಅವರ ವಿರುದ್ಧ 2ನೇ ಆರೋಪಿತ ವಿಜಯಗಳಿಸಿದ್ದರಿಂದ ನಾವು ಆರೋಪಿತರ ವಿರುದ್ಧ ದ್ವೇಷ ಹೊಂದಿದ್ದೆವು ಎಂದರೆ ಸರಿಯಲ್ಲ.

ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದೆ ಇದ್ದರೂ ಕೂಡ ಹಳೆಯ ದ್ವೇಷದ ಆಧಾರದ ಮೇಲೆ ಅವರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**